**CC No.3224/2022**
**DW:02**

**ದಿಃ11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**
**ಮುಂದುವರೆದ ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಾನು 2014 ರಿಂದ ಟ್ಯಾಕ್ಟರ್ business ಮಾಡುತ್ತಿದ್ದೇನೆ. ನನಗೆ 2014 ರಿಂದಲೇ ಪಿರ್ಯಾದುದಾರರು ಪರಿಚಿತರು. ಈಗನೋಡುತ್ತಿರುವ ನಿ.ಪಿ. 45 ಆರೋಪಿತ ಸಂಸ್ಥೆ ಲೇಟರ್ ಹೇಡ್ ನಲ್ಲಿ ಇರುತ್ತದೆ, ಆದರೆಅದರಲ್ಲಿನ ಸೀಲು ಮತ್ತು ಸಹಿ ಆರೋಪಿತ ಸಂಸ್ಥೆಯದಲ್ಲಾ. ನಿ.ಪಿ. 45 ರಂತೆ ನಾನು ಪಿರ್ಯಾದುದಾರರಿಗೆ ಟ್ಯಾಕ್ಟರ್ ಗಳನ್ನು ನೀಡುವಂತೆ ಮನವಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಈಗನೋಡುತ್ತಿರುವ ನಿ.ಪಿ. 46 ರಲ್ಲಿ ನನ್ನ ಭಾವಚಿತ್ರ ಇರುತ್ತದೆ. ನಿ.ಪಿ.46 ರಲ್ಲಿ ಆರೋಪಿತ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ. 46 ರಲ್ಲಿ ನಮ್ಮ ಸಂಸ್ಥೆಯಸೀಲು ಮತ್ತು ನನ್ನ ಸಹಿ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.46 ರ ಬಾಂಡ ಪೇಪರ್ ನ್ನು ನಾನೇ ಖರೀದಿಸಿರುತ್ತೇನೆ. ಸದರಿ ಬಾಂಡ್ ಪೇಪರ್ ನ್ನು ಮನಮಾಡ್ ನಿಂದ ಖರೀದಿಸಿರುತ್ತೆನೆಂದರೆ ಸರಿ. ಟ್ಯಾಕ್ಟರಗಳನ್ನು ನಮಗೆ ಹಂಚಿಕೆ ಮಾಡುವ ಸಲುವಾಗಿ ನಿ.ಪಿ.46 ರಂತೆ ಪಿರ್ಯಾದುದಾರ ಮತ್ತು ನನ್ನ ನಡುವೆ ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ20.08.2014 ರಂದು ನಿ.ಪಿ.46 ರಂತೆ ನಮ್ಮ ನಡುವೆ ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ. 46 ಬಾಂಡ್ ಪೇಪರ್ ನ್ನು ಖರೀದಿಸಿ ನಾನು ಪಿರ್ಯಾದುದಾರರ ಬಳಿ ಮುಂಬೈಗೆಹೋಗಿದ್ದೆ ಅಂದರೆ ಸರಿ. ಆಗ ಟ್ಯಾಕ್ಟರ್ ಹಂಚಿಕೆ ಮಾಡುವ ಬಗ್ಗೆ ನನ್ನ

ಮತ್ತು ಪಿರ್ಯಾದುದಾರರ ನಡುವೆ ಮಾತುಕತೆ ಆಯಿತು ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ನನಗೆ ಎಷ್ಟು ಟ್ರ್ಯಾಕ್ಟರ್ ಗಳು ಹಂಚಿಕೆಯಾಗಿವೆ ಎಂದು ನನಗೆ ಹೇಳಲು ಆಗುವುದಿಲ್ಲ. ಟ್ರ್ಯಾಕ್ಟರ್ ಹಂಚಿಕೆ ಮಾಡಿದ ಬಗ್ಗೆ ಪಿರ್ಯಾದುದಾರರು ಇನವಾಯ್ಸ ನೀಡಿರುತ್ತಾರೆಂದರೆ ಸರಿಯಲ್ಲ. ಈಗನೋಡುತ್ತಿರುವ ನಿ.ಪಿ.58 ರಿಂದ 60 ರಲ್ಲಿ ಕೆಲವೂ ಇನವಾಯ್ಸ ಗಳು ನನಗೆ ಬಂದಿರುತ್ತವೆ, ಕೆಲವೂ ಇನವಾಯ್ಸ ಗಳು ಬಂದಿರುವುದಿಲ್ಲ. ನಿ.ಪಿ. 46 ರ ನಂತರ ದಿಃ21.08.2014 ರಂದು ನಾನು ನಿ.ಪಿ.47 ರಂತೆ ಪತ್ರವನ್ನು ಹಾಗೂ ಅದರೊಂದಿಗೆ 06 ಚೆಕ್‌ಗಳನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆಂದರೆ 06 ಖಾಲಿ ಚೆಕ್ ನ್ನು ನೀಡಿರುತ್ತೇನೆ ಆದರೆ ನಿ.ಪಿ 47 ರ ಪತ್ರವನ್ನು ನೀಡಿರುವುದಿಲ್ಲ. ನಿ.ಪಿ. 47 ಆರೋಪಿತ ಸಂಸ್ಥೆಯ ಲೇಟರ್ ಹೇಡ್ ನಲ್ಲಿರುತ್ತದೆ ಅಂದರೆ ಸರಿ. ನಿ.ಪಿ.47 ರಲ್ಲಿ ನಮ್ಮ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸೀಲು ಮತ್ತು ಸಹಿ ನಮ್ಮದೇ ಆಗಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.48 ರಲ್ಲಿನ ಭಾವಚಿತ್ರ ನನ್ನದೆ ಆಗಿರುತ್ತದೆ, ಆದರೆ ಅದರಲ್ಲಿನ ಸಹಿ ಮತ್ತು ಸೀಲು ನಮ್ಮದಲ್ಲ. ನಿ.ಪಿ48 ರ ಬಾಂಡ ಪೇಪರ್ ನ್ನು ಮನಮಾಡ್ ನಿಂದ ನಾನೇ ಖರೀದಿಸಿರುತ್ತೇನೆ ಎಂದರೆ ಸರಿ. ನಿ.ಪಿ.48 ರಲ್ಲಿ ಪ್ರತಿ ಪುಟದ ಕೋನೆಯಲ್ಲಿ ಆರೋಪಿತ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇರುತ್ತವೆ ಅಂದರೆ ಸರಿಯಲ್ಲ. ನಿ.ಪಿ.01 ಮತ್ತು 02 ರಲ್ಲಿ ನನ್ನ ಸಹಿ ಇರುತ್ತದೆ. ನಿ.ಪಿ. 01 ರಿಂದ 10 ಚೆಕ್ಕಗಳ ಪೈಕಿಕೆಲವು ಚೆಕ್‌ಗಳಲ್ಲಿ ನನ್ನ ಸಹಿ ಇರುತ್ತದೆ, ಉಳಿದೆ ಚೆಕ್ಕುಗಳಲ್ಲಿ ನನ್ನ ಸಹಿಇರುವುದಿಲ್ಲ. ಸದರಿಚೆಕ್ ಗಳಲ್ಲಿನ

ಸಹಿ ಮತ್ತು ನಿ.ಪಿ.45 ರಲ್ಲಿ ನ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.48 ರ ಬಾಂಡ ಪೇಪರ್ ನ್ನು ತೆಗೆದುಕೊಂಡು ನಾನು ಪಿರ್ಯಾದುದಾರರ ಬಳಿ ಮುಂಬೈಗೆ ಹೋಗಿದ್ದೆ ಅಂದರೆ ಖಾಲಿ ಬಾಂಡ್ ಪೇಪರ್ ನ್ನು ತೆಗೆದುಕೂಂಡು ಹೋಗಿದ್ದೆ. ಆ ಸಮಯದಲ್ಲಿ ನನ್ನೊಂದಿಗೆ ನನ್ನ ಸ್ನೇಹಿತನಾದ ದೇವಿದಾಸ್ ಎನ್ನುವವರನ್ನು ಕರೆದುಕೂಂಡು ಹೋಗಿದ್ದೆ ಅಂದರೆ ದೇವಿದಾಸ್ ರವರನ್ನು ಕರೆದುಕೊಂಡು ಹೋಗಿದ್ದೆ ಆದರೆ ಇಸ್ವೀ ನೆನಪಿಲ್ಲ. ನಿ.ಪಿ.48 ರಲ್ಲಿ ಸದರಿ ದೇವಿದಾಸ್ ರವರು ಸಹಿ ಇರುತ್ತದೆ ಅಂದರೆ ನನಗೆ ಹೇಳಲು ಆಗುವುದಿಲ್ಲ. ರಾಜು ಪ್ರಭಾಕರ್ ಜಾಧವ್ ನನ್ನ ಸ್ನೇಹಿತರು ಎಂದರೆ ಸರಿ. ಅವರನ್ನು ಒಮ್ಮೆ ನನ್ನೂಂದಿಗೆ ಪಿರ್ಯಾದುದಾರರ ಬಳಿ ಕರೆದುಕೊಂಡು ಹೋಗಿದ್ದೆ ಅಂದರೆ ಸರಿ. ನಿ.ಪಿ. 46 ರಲ್ಲಿ ಸದರಿ ರಾಜು ಪ್ರಭಾಕರ್ ಜಾಧವ್ ರವರ ಸಹಿ ಇರುತ್ತದೆ ನನಗೆ ಹೇಳಲು ಆಗುವುದಿಲ್ಲ ನಿ.ಪಿ.45 ರಿಂದ 51 ರ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದ ನಂತರ ಗೊತ್ತಾಯಿತು.

ನಿ.ಪಿ.50 ರಲ್ಲಿ ಬಾಂಡನ್ನು ಖರೀದಿಸುವವರ ಕಾಲಂನಲ್ಲಿತೋರಿಸಿರುವ ಹೆಸರು ಮತ್ತು ವಿಳಾಸ ನನ್ನದೆ ಆಗಿರುತ್ತದೆ. ನಿ.ಪಿ. 50 ರಲ್ಲಿ ಆರೋಪಿತ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷೀ ಮುಂದುವರೆ ಖಾಲಿ ಬಾಂಡ ಪೇಪರ್ ನ್ನು ಕೊಟ್ಟಿದ್ದಾಗಿ ನುಡಿಯುತ್ತಾರೆ. ನಿ.ಪಿ.51 ಆರೋಪಿತ ಸಂಸ್ಥೆಯ ಲೇಟರ್ ಹೇಡ್ ನಲ್ಲಿ ಇರುತ್ತದೆ ಎಂದರೆ ಸರಿ. ಅದರಲ್ಲಿ ಆರೋಪಿ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇರುತ್ತವೆ ಎಂದರೆ ಸರಿಯಲ್ಲ. ನಿ.ಪಿ.51 ರಲ್ಲಿ ಆರೋಪಿ ಸಂಸ್ಥೆಯ ಸೀಲು ಮತ್ತು ನನ್ನ ಸಹಿ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 01 ರಿಂದ 10 ಚೆಕ್

ನ್ನು ನಾನೇ ಪಿರ್ಯಾದುದಾರರಿಗೆ ನೀಡಿರುತ್ತೇನೆ ಅಂದರೆ ಸರಿ. ಸಾಕ್ಷೀಮುಂದುವರೆದು ಖಾಲಿ ಚೆಕ್ ಗಳನ್ನು ನೀಡಿದ್ದಾಗಿ ನುಡಿಯುತ್ತಾರೆ. ಸದರಿಚೆಕ್ ಗಳಿಗೆನಾನು ಸಹಿ ಮಾಡಿರಲಿಲ್ಲ. ನಿ.ಪಿ.01 ರಿಂದ 10 ಚೆಕ್ಕುಗಳಲ್ಲಿ ನೀವು ಸಹಿ ಮಾಡಿದಚೆಕ್ಕುಗಳು ಯಾವವು ಎಂದು ಪ್ರಶ್ನೀಸಿದಾಗ ಸಾಕ್ಷೀಯು ಮೊದಲು ತಮಗೆ ಹೇಳಲು ಆಗುವುದಿಲ್ಲ ಎಂದು ನುಡಿದಿದ್ದು, ನಂತರ ನಿ.ಪಿ.01 ರಿಂದ 10 ಚೆಕುಗಳಲ್ಲಿ ತಮ್ಮ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.13 ರಿಂದ 20 ರಲ್ಲಿ ಚೆಕ್ ಅಮಾನ್ಯಗೊಳ್ಳಲು ಕಾರಣ funds insufficient ಮತ್ತು payment stop ಎಂದು ಇದ್ದು, signature differs ಎಂಬ ಕಾರಣ ಇರುವುದಿಲ್ಲ ಅಂದರೆ ಸರಿ. ಸಾಮಾನ್ಯ ಬ್ಯಾಂಕ ಖಾತೆತೆರೆಯುವ ಸಮಯದಲ್ಲಿ 4 – 5 specimen ಸಹಿಗಳನ್ನು ಪಡೆದುಕೊಳ್ಳುತ್ತಾರೆ ಅಂದರೆ ನನಗೆ ಗೂತ್ತಿಲ್ಲ. ನಿ.ಪಿ.52 ರಲ್ಲಿ ನನ್ನ ಸಹಿ ಇರುತ್ತದೆ. ಕಂಪನಿ ಅವರು ಕೇಳಿದಾಗ ನಿ.ಪಿ.52 ನ್ನು ಪಡೆದು ನೀಡಿರುತ್ತೇನೆ. **(ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**